# ಮುಂಜಾನೆ ಎದ್ದು ಗೋವಿಂದ ಎನ್ನಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 456.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 279.
3. **Note:** This song is not available in Shri Betageri Krishna Sharma and Shri Bengeri Huchha Rayaru books.
4. **Note:** Lyrics in both the above references are same and the singer has followed these lyrics.

ರಾಗ: ಆನಂದ ಭೈರವಿ ತಾಳ: ಅಟ

ಮುಂಜಾನೆಯೆದ್ದು ಗೋವಿಂದ ಎನ್ನಿ, ನಮ್ಮ || ಪ ||
ನಂಜಿಪ ದುರಿತವು ದೂರವೆನ್ನಿ || ಅಪ ||

ಅಸುರ ಸಂಹಾರಿಯೆನ್ನಿ ದಶಶಿರ ವೈರಿಯೆನ್ನಿ
ಶಿಶುವು ಮೊರೆಯಿಡಲು ರಕ್ಷಿಸಿದನೆನ್ನಿ
ಅಸುರನರಣ್ಯದೊಳ್ ಭಸ್ಮವ ಮಾಡಲು
ವಸುಧೆಯೊಳ್ ನಾಟ್ಯವನಾಡಿದನೆನ್ನಿ || 1 ||

ಬಲಿಯ ಬೇಡಿದನೆನ್ನಿ ಚೆಲುವ ವಾಮನನೆನ್ನಿ
ಲಲನೆಯ ಅಭಿಮಾನ ಕಾಯ್ದನೆನ್ನಿ
ಕಲಿಯುಗದಲಿ ಬಂದ ಕೃಷ್ಣಾವತಾರನೆನ್ನಿ
ಸಲೆ ಪಾಂಡು ಸುತರನ್ನು ಪಾಲಿಸಿದನೆನ್ನಿ || 2 ||

ಕರುಣಾಕರನೆನ್ನಿ ಕಪಟ ನಾಟಕನೆನ್ನಿ
ಕರಿರಾಜನನು ಕಾಯ್ದ ಕೃಷ್ಣನೆನ್ನಿ
ಪರಿಪರಿಯಿಂದಲಿ ಭಕ್ತರ ಸಲಹುವ
ವರದ ಪುರಂದರ ವಿಠಲನೆನ್ನಿ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ನಂಜಿಪ...** – ವಿಷದಂತೆ ನಮ್ಮನ್ನು ತೊಂದರೆಗೀಡುಮಾಡುವ, ನಮ್ಮನು ಅಂಜಿಪ, ಹೆದರಿಸುವ.

**ಅಸುರ ಸಂಹಾರಿಯೆನ್ನಿ...** – ರಾಮಾವತಾರದ ಸಂದರ್ಭ.

**ಶಿಶುವು ಮೊರೆಯಿಡಲು...** – ಪ್ರಹ್ಲಾದ ಉಪಾಖ್ಯಾನ.

**ಅಸುರನರಣ್ಯದಿ...** – ಮೋಹಿನೀ ಭಸ್ಮಾಸುರ ಪ್ರಸಂಗ.

**ಲಲನೆಯ ಅಭಿಮಾನ...** – ದ್ರೌಪದಿಯ ಮಾನವನ್ನು ಕಾಯ್ದ ಪ್ರಸಂಗ (ದುಃಶಾಸನನಿಂದ ವಸ್ತ್ರಾಪಹರಣ ಸಂದರ್ಭದಲ್ಲಿ).

**ಕಲಿಯುಗದಲಿ ಬಂದ** – ದಿಟವಾಗಿ ಕೃಷ್ಣನು ದ್ವಾಪರಯುಗದಲ್ಲಿ ಬಂದವನು; ಆದರೆ ಅವನ ಪ್ರಭಾವ ಕಲಿಯುಗದಲ್ಲೂ ಉಳಿದುಬಂದಿದೆ ('ಕಲೌಕೃಷ್ಣಃ).

**ಕರುಣಾಕರನೆನ್ನಿ ಕಪಟನಾಟಕನೆನ್ನಿ** – ಭಕ್ತರಿಗೆ ಕರುಣೆ ತೋರುವನು, ದುಷ್ಟರನ್ನು ಮರುಳುಮಾಡಿ ಕೊಲ್ಲುವನು.

**Classification:** Keerthane
**Ankita:** varada purandara vittala
**Location:** NA
**Category:** dashavatara, jeevanoddhara.
**Sub-Category:** Krishna, beligge, udaya, govinda, bhaya, asura, ravana, koosu, kaadu, bhumi, bali, vamana, draupadi, abhimana, kaliyuga, pandu, maga, karuna, mosa, gaja,
**Pravachana:** NA
**Explanation:** NA